**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ' ಸೋಜಾ ಇವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

**ವಿಷಯ:** "1997 ಕರ್ನಾಟಕ ಸರ್ಕಾರ ಅರೇವೈದ್ಯಕೀಯ ಮಂಡಳಿಯನ್ನು ಸ್ಥಾಪಿಸಿ, ಗ್ರಾಮೀಣ ಪ್ರದೇಶದ ಮಕ್ಕಳು 10ನೇ ತರಗತಿ ಉತ್ತೀರ್ಣರಾಗಿ ಪ್ರವೇಶವನ್ನು ಅನೇಕ ಅರೆವೈದ್ಯಕೀಯ ಡಿಪ್ಲೋಮ ಕೋರ್ಸ್‌ಗಳಿಗೆ ನೀಡಿ, ಗ್ರಾಮೀಣ ಭಾಗದಯವರಿಗೆ ಖಚಿತ ಉದ್ಯೋಗವನ್ನು ನೀಡುವ ಉದ್ದೇಶ ಹೊಂದಿದ್ದು, ಲಕ್ಷಾಂತರ ವಿದ್ಯಾರ್ಥಿಗಳಿಗೆ ಈ ಕೋರ್ಸ್‌ಗಳ ಮೂಲಕ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉತ್ತಮ ವೇತನದೊಂದಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಸದ್ರಿ ಕೋರ್ಸ್‌ಗಳಿಗೆ ದ್ವಿತೀಯ 10+2 ಪಿಯುಸಿಯ Physics, Chemistry, Biology/ Mathematics ಹೊಂದಿ ಪ್ರವೇಶ ನೀಡಬೇಕೆಂದು ಸರ್ಕಾರದ ಆದೇಶವನ್ನು ಹಿಂತೆಗೆದುಕೊಳ್ಳಬೇಕಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ".

* * * * * * *

**ಉತ್ತರ:** ದಿನಾಂಕ:03.02.2026ರಂದು ನಡೆದ Karnataka State Allied and Healthcare Council ಸಭೆಯಲ್ಲಿ ಈ ವಿಷಯದ ಕುರಿತು ಚರ್ಚಿಸಿದ್ದು, Ministry of Health and Family Welfare, National Commission for Allied and Healthcare Profession, New Delhi ಇವರ ಅಧಿಸೂಚನೆ ದಿನಾಂಕ:09-01-2026ರ ಪ್ರಕಾರ 2026-27ನೇ ಸಾಲಿನಿಂದ ಜಾರಿಗೆ ಬರಲಿರುವ Allied and Healthcare ಪದನಾಮಕರಣ ಮತ್ತು ಪ್ರವೇಶ ಅರ್ಹತಾ, ಮಾನದಂಡಗಳ ಪ್ರಕಾರ ಕೆಳಕಂಡ ನಾಲ್ಕು ಕೋರ್ಸುಗಳನ್ನು (Physics, Chemistry, Biology/Mathematics) 10+2 ಅರ್ಹತೆಯೊಂದಿಗೆ ಅಧಿಕೃತವಾಗಿ ಗುರುತಿಸಲಾಗಿದೆ.

1) Diploma in Anaesthesia and Operation Theatre Technology (D.AOTT).
2) Diploma in Dialysis Technology (D.DT).
3) Diploma in Radiotherapy Technology (D.RT).
4) Diploma in Health Information Management (D.HIM).

ರಾಜ್ಯದಲ್ಲಿ 645 ಪ್ಯಾರಾ ಮೆಡಿಕಲ್ ಕಾಲೇಜುಗಳಿದ್ದು, ಸುಮಾರು 35000 (35 ಸಾವಿರ) ಸೀಟುಗಳಿದ್ದು ಸದರಿ ವಿದ್ಯಾರ್ಥಿಗಳು ಉತ್ತೀರ್ಣರಾದ ನಂತರ ಗ್ರಾಮೀಣ ಪ್ರದೇಶಗಳ ಆರೋಗ್ಯ ಸೇವೆಗಳಿಗೆ ಮಾನವ ಸಂಪನ್ಮೂಲವನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯಲ್ಲಿ ಉಳಿದ ಕೋರ್ಸ್‌ಗಳಾದ DMLT, DMIT, DHI, DMRT, DOT, DDM, DDH ಮತ್ತು DPTಗಳ ಪ್ರವೇಶಾತಿ ಮತ್ತು ಅರ್ಹತಾ ಮಾನದಂಡಗಳ ಕುರಿತು ಪೂರ್ಣ ಪ್ರಮಾಣದ ನಿಯಮಾವಳಿಗಳು ಅನುಷ್ಠಾನಕ್ಕೆ ಬರುವವರೆಗೂ ಕಾಲಾವಕಾಶ ಕೇಳಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರು ದಿನಾಂಕ:11.02.2026ರಂದು The Chairman, National Commission for Allied and Healthcare Profession, New Delhi ಇವರಿಗೆ ಪತ್ರ ಬರೆದಿರುತ್ತಾರೆ.

ಮುಂದುವರೆದು, ಸದರಿ ವಿಷಯದ ಬಗ್ಗೆ NCAHP ಅವರಿಗೆ ತುರ್ತು ಸ್ಪಷ್ಟೀಕರಣ ನೀಡುವಂತೆ ದಿನಾಂಕ:02.03.2026 ರಂದು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ಮತ್ತೊಮ್ಮೆ ಕೋರಿರುತ್ತಾರೆ.

**ಕಡತ ಸಂ: ಎಂಇಡಿ 156 ಎಂಎಸ್‌ಎಫ್ 2026**

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.